ಬಿ.ಜನಾರ್ದನ ಭಟ್ ಇಂಗ್ಲಿಷ್ ಉಪನ್ಯಾಸಕರಾಗಿ, ಕಾಲೇಜು ಪ್ರಾಂಶುಪಾಲರಾಗಿ ಕೆಲಸ ಮಾಡಿದವರು. ಉಡುಪಿಯ ಬೆಳ್ಮಣ್ ನಿವಾಸಿ. ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಹೆಚ್ಚು ಒಲವುಳ್ಳ ಅವರು ಕಾದಂಬರಿ, ಮಕ್ಕಳ ಸಾಹಿತ್ಯ ಮತ್ತು ಅನುವಾದ ಕ್ಷೇತ್ರಗಳಲ್ಲಿಯೂ ಕೆಲಸ ಮಾಡಿದವರು. 'ಉತ್ತರಾಧಿಕಾರ', 'ಹಸ್ತಾಂತರ', ಮತ್ತು 'ಅನಿಕೇತನ' ಕಾದಂಬರಿ ತ್ರಿವಳಿ, 'ಮೂರು ಹೆಜ್ಜೆ ಭೂಮಿ', 'ಕಲ್ಲು ಕಂಬವೇರಿದ ಹುಂಬ', 'ಬೂಬರಾಜ ಸಾಮ್ರಾಜ್ಯ' ಮತ್ತು 'ಅಂತಃಪಟ' ಕಾದಂಬರಿಗಳು ಸೇರಿದಂತೆ 83ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ.

ಮನೆಯ ಬೀಗದಕೈಯನ್ನು ಕೊಟ್ಟಿಗೆಯಲ್ಲಿ ಬಿಟ್ಟುಹೋಗುವ ಪದ್ಧತಿಯನ್ನು ನಿಲ್ಲಿಸಿದ. ಮನೋವೇದನೆಯನ್ನು ತಾಳಲಾರದೆ ಹಿತೈಷಿಗಳ ಸಲಹೆಯಂತೆ, ನಡುಕಣಿಯ ಅಣ್ಣ ತಂತ್ರಿಗಳ ಬಳಿಗೆ ಹೋಗಿ ಒಂದು ಜ್ಯೋತಿಷ ಪ್ರಶ್ನೆ ಇರಿಸಿದ. 'ನನ್ನ ಹೆಂಡತಿ ನನ್ನ ಜತೆಗೆ ಬಂದು ಇರುತ್ತಾಳಾ?' ಎನ್ನುವುದು ಅವನ ಪ್ರಶ್ನೆಯಾಗಿತ್ತು.

ಅಣ್ಣ ತಂತ್ರಿಗಳು ಕವಡೆ ರಾಶಿಯನ್ನು ತುಂಬಾ ಹೊತ್ತು ನೇವರಿಸಿ ಧ್ಯಾನಿಸುತ್ತಾ ಒಂದು ಹಿಡಿ ಕವಡೆಗಳನ್ನು ಎತ್ತಿಕೊಂಡು ಮಣೆಯ ಮೇಲೆ ಹಾಕಿದರು. ಅವುಗಳನ್ನು ಲೆಕ್ಕ ಹಾಕಿ, ಸ್ವಲ್ಪ ಯೋಚಿಸಿ ಕೊನೆಗೆ ಹೀಗೆ ಹೇಳಿದರು. 'ನಿಮ್ಮ ಮನೆಗೆ ಒಂದು ಶಾಪ ಉಂಟು. ಅದನ್ನು ಪರಿಹಾರ ಮಾಡಿಕೊಂಡರೆ ಬರುತ್ತಾಳೆ. ಆದರೆ ಕಷ್ಟ ಉಂಟು.'

ಜಯಂತ ಕೇಳಿದ, 'ಏನು ದೋಷ ತಂತ್ರಿಗಳೇ?' 'ನಿಮ್ಮ ತಂದೆ ಯಾವುದಾದರೂ ಪ್ರಾಣಿಗೆ, ದೊಡ್ಡ ಪ್ರಾಣಿ, ದನ ಅಥವಾ ಆನೆಯಂಥದ್ದು...ಅದಕ್ಕೆ ಏನಾದರೂ ಅನ್ಯಾಯ ಮಾಡಿದ್ದರಾ? ಅದರ ಶಾಪ ಎಂದು ಕಾಣಿಸುತ್ತಾ ಉಂಟು' ಎಂದು ತಂತ್ರಿಗಳು ವಿವರಿಸಲು ಪ್ರಯತ್ನಿಸಿದರು.

ಜಯಂತ ಯೋಚನೆ ಮಾಡಿ ಹೇಳಿದ. 'ನಮ್ಮೂರಿನಲ್ಲಿ ಮಠದ ಆನೆ ಉಂಟು. ಹಿಂದೆ ಇದ್ದ ಮಾವುತ ಅದನ್ನು ಸ್ನಾನಕ್ಕೆ ಹೊಳೆಗೆ ಹೋಗುವ ದಾರಿಯಲ್ಲಿ ಸಿಗುವ ಮನೆಗಳಿಗೆ ಕರೆದುಕೊಂಡು ಹೋಗುತ್ತಿದ್ದ; ನಾನೂ ಸಣ್ಣವನಿದ್ದಾಗ ನೋಡಿದ್ದೇನೆ. ಒಮ್ಮೆ ನಮ್ಮ ಮನೆಗೆ ಆನೆ ಬಂದಾಗ ನಮ್ಮ ತಂದೆ ಮಾವುತನಿಗೆ ಬಯ್ದಿದ್ದರು; ಆನೆಯನ್ನು ಮಠದವರಿಗೆ ಸಾಕಲು ಆಗದಿದ್ದರೆ ಬೇರೆಯವರಿಗೆ ಕೊಡಬಹುದಲ್ಲ? ಹೀಗೆ ಮನೆಮನೆಗೆ ಕಳುಹಿಸುವುದು ಯಾಕೆ ಎಂದು ಹೀಯಾಳಿಸಿದ್ದರು. ಅದರ ದೋಷ ಇರಬಹುದಾ ನೋಡಿ ತಂತ್ರಿಗಳೇ?'

ತಂತ್ರಿಗಳು ಮತ್ತೊಮ್ಮೆ ಕವಡೆ ಹಾಕಿ, 'ಅದೇ..ಅದೇ.... ಅದೇ ಹೇತು!' ಎಂದರು. 'ಈಗ ನಾನು ಏನು ಮಾಡಬಹುದು ತಂತ್ರಿಗಳೇ? ದೋಷ ಪರಿಹಾರಕ್ಕೆ ಏನಾದರೂ ಇಲ್ಲವಾ?' ಎಂದು ಜಯಂತ ಕೇಳಿದ.

ತಂತ್ರಿಗಳು ಯೋಚಿಸಿ, 'ಪರಿಹಾರ ಅಂದರೆ ಏನು? ಯೋಚಿಸಬೇಕು. ಅದೇ ಆನೆಗೆ ನೀವು ನಿಮ್ಮ ಖರ್ಚಿನಲ್ಲಿ ಆಗಾಗ ಆಹಾರ ಕೊಡುತ್ತಾ ಬರಬಹುದು. ಮತ್ತೆಂಥದು ಪರಿಹಾರ? ಆನೆಯ ಮನಸ್ಸಿಗೆ ಸಂತೋಷವಾದರೆ ನಿಮಗೂ ಒಳ್ಳೆಯದಾಗಬಹುದು. ನಿಮ್ಮ ಹೆಂಡತಿಯೂ ಮನೆಗೆ ಬಂದಾಳು' ಎಂದರು.

ಅದರ ನಂತರ ಜಯಂತ ಮಠದ ಆನೆಗೆ ಆಗಾಗ ದವಸ ಧಾನ್ಯಗಳನ್ನು ಮತ್ತು ಸೊಪ್ಪುಗಳನ್ನು ಕೊಟ್ಟುಬರುವ ಕ್ರಮವನ್ನು ಪ್ರಾರಂಭಿಸಿದ್ದ. ಒಮ್ಮೊಮ್ಮೆ ಬಸಪ್ಪನಿಗೆ ಹೇಳಿ ಆನೆ ತಿನ್ನುವ ಸೊಪ್ಪುಗಳನ್ನು ಕಡಿಸಿ, ಬಸಪ್ಪನ ಬಳಿ ಹೊರಿಸಿಕೊಂಡು ಹೋಗಿ ಆನೆಗೆ ಕೊಡಿಸುತ್ತಲೂ ಇದ್ದುದರಿಂದ ಆನೆಯ ಬಗ್ಗೆ ಜಯಂತನಿಗೆ ವಿಶೇಷ ಕಾಳಜಿಯಿದೆ ಎಂದು ತಿಳಿದಿದ್ದ ಬಸಪ್ಪ ಆನೆಗೆ ಅಪಘಾತವಾದ ಸುದ್ದಿಯನ್ನು ಈ ದಿನ ಜಯಂತನಿಗೆ ಅರುಹಿದ್ದ. ಜಯಂತ ಆಮೇಲೆ ಬಸಪ್ಪನನ್ನು ಕರೆದುಕೊಂಡು ಆನೆಯನ್ನು ನೋಡಿಬರಬೇಕೆಂದು ನಿರ್ಧರಿಸಿದ. ಬಸಪ್ಪ ತನ್ನ ಅಂತಸ್ಥಿಗಿಂತ ಕೆಳಗಿನವನಾದ ಕಾರಣ ಅವನನ್ನು ತನ್ನ ಅಂತರಂಗದ ಸಮಸ್ಯೆಗಳನ್ನು ಚರ್ಚಿಸಲು ಒದಗುವ ಸಮಾನಸ್ಕಂಧನಾಗಿ ಸ್ವೀಕರಿಸಲು ಜಯಂತ ಸಿದ್ಧನಿರಲಿಲ್ಲ. ಅವನನ್ನು ತನ್ನ ಬಂಟನಂತೆ ಸದಾ ತನ್ನ ಬೆನ್ನ ಹಿಂದೆ ಕಟ್ಟಿಕೊಂಡು ತಿರುಗಬಲ್ಲಷ್ಟು